## ಕಾಡಿಗೆ ಕಣ್ಣು



ಅಕ್ಟೋಬರ್‌ನಿಂದ ನವೆಂಬರ್ ಇದರ ಸಂತತಿ ಸಮಯ. ಗರ್ಭಾವಸ್ಥೆಗೆ ಆರು ತಿಂಗಳು ಬೇಕು. ಹೆಣ್ಣು ಸಾಮಾನ್ಯವಾಗಿ ಒಂದು ಮರಿಗೆ ಜನ್ಮ ಕೊಡುತ್ತದೆ. ಅಪರೂಪಕ್ಕೆ ಎರಡು ಶಿಶುಗಳು ಹುಟ್ಟುವುದೂ ಉಂಟು. ಮೊದಲ ಕೆಲವು ವಾರಗಳಲ್ಲಿ ತಾಯಿ ತನ್ನ ಶಿಶುಗಳನ್ನು ನಿರಂತರವಾಗಿ ಜೊತೆಗಿಟ್ಟುಕೊಂಡು ಸಾಕುತ್ತಾಳೆ. ಇವುಗಳಿಗೆ ಬೇಕಾದ ವಿದ್ಯೆ–ಬುದ್ಧಿ ಕಲಿಸುತ್ತಾಳೆ. ಹನ್ನೆರಡರಿಂದ ಹದಿನೈದು ವರ್ಷಗಳ ತನಕ ಬಾಳಬಲ್ಲವು.

ಇವಕ್ಕೆ ಮಾಂತ್ರಿಕ ಮತ್ತು ಔಷಧೀಯ ಶಕ್ತಿಗಳಿವೆ ಎಂಬುದಾಗಿ ಮನುಷ್ಯನಲ್ಲಿರುವ ಮೌಢ್ಯವೇ, ಇವುಗಳಿಗೆ ದೊಡ್ಡ ಕಂಟಕ. ಮಂತ್ರವಾದಿಗಳು ಎದುರಾಳಿಗಳ ಸಾಯಿಸಲು ಇವುಗಳ ಬಲಿ ಕೊಡುತ್ತಾರಂತೆ. ಕಾಡುಪಾಪವನ್ನು ಹಿಡಿದು, ಶತ್ರುವಿನ ಹೆಸರನ್ನು ಅದಕ್ಕೆ ನಾಮಕರಣ ಮಾಡಿ, ಚಿತ್ರಹಿಂಸೆ ಕೊಟ್ಟು ಅದನ್ನು ಕೊಲ್ಲಲಾಗುತ್ತದೆ. ಹೀಗೆ ಮಾಡಿದರೆ ನಮಗಾಗದ ದುಶ್ಮನ್ ಕೂಡ ಅದರಂತೆಯೇ ನರಳಿ ನರಳಿ ಸಾಯುತ್ತಾನೆ ಎಂಬ ಪೂರ್ವಗ್ರಹ–ಹುಚ್ಚು ಜನರಲ್ಲಿದೆ.

ಕಳ್ಳ ಬೇಟೆಗಾರರಿಂದ ತೀವ್ರ ಬೆದರಿಕೆಯನ್ನು ಎದುರಿಸುತ್ತಿರುವ ಇವು ಸದ್ಯಕ್ಕೆ ಅವನತಿಯ ಕಡೆಗೆ ನೂಕಲಾಗುತ್ತಿರುವ ಜೀವಿಗಳು. ‘ಐಯುಸಿಎನ್’ ಇವುಗಳನ್ನು ‘ಅಳಿವಿನಂಚಿನಲ್ಲಿರುವ ಪ್ರಾಣಿ’ ಎಂದು ಪಟ್ಟಿ ಮಾಡಿದೆ. ‘ಡಬ್ಲ್ಯುಡಬ್ಲ್ಯುಎಫ್–ಇಂಡಿಯಾ’ ಪಶ್ಚಿಮ ಘಟ್ಟ ಮತ್ತು ನೀಲಗಿರಿ ಪ್ರದೇಶದಲ್ಲಿ ತನ್ನ ವ್ಯಾಪಕ ಸಂರಕ್ಷಣಾ ಕಾರ್ಯಗಳ ಮೂಲಕ ಸ್ಲೆಂಡರ್ ಲೋರಿಸ್‌ಗಳನ್ನು ಹೇಗಾದರೂ ಮಾಡಿ ಉಳಿಸಲು ಶ್ರಮಿಸುತ್ತಿದೆ. ಅಪರೂಪವೂ ನೋಡಲು ಸೌಮ್ಯವೂ ಆದ ಈ ಜೀವಿಯನ್ನು ಉಳಿಸುವುದು ನಿಜಕ್ಕೂ ಕಷ್ಟದ ಕೆಲಸವಲ್ಲ. ಆದರೆ, ಆ ಜೀವ ಬಯಸುವ ಪರಿಸರವನ್ನೂ ಕಾಡನ್ನೂ ನಾವು ಜತನ ಮಾಡಿಕೊಡಲು ತಯಾರಿರಬೇಕಷ್ಟೆ. ●